**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ದಿನಾಂಕ 2-11-2011 ರಂದು ಕರೆದ ಏಳನೇಯ (ತುರ್ತು) ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 3. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 4. | ಶ್ರೀ ಭೋಜನಗೌಡ | ಸದಸ್ಯರು |
| 5. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 6. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 7. | ಶ್ರೀಮತಿ ಆಶಾ ಶೇಷಾದ್ರಿ | ಸದಸ್ಯರು |
| 8. | ಡಾ. ಚಲ್ಲಯ್ಯ | ಸದಸ್ಯರು |
| 9. | ಶ್ರೀ ಬಸವರಾಜಪಾಟೀಲ ಇಟಗಿ | ಸದಸ್ಯರು |
| 10. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 11. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 12. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಏಳನೇಯ (ತುರ್ತು) ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| ಅನುಕ್ರಮ ಸಂ: 1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಭೂಮಿಯನ್ನು ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕಾಗಿ ನೀಡುವುದನ್ನು ಪರಿಶೀಲಿಸುವ ಕುರಿತು.** |
|---|---|

ರಾಯಚೂರು ಕೃಷಿ ವಿಶ್ವವಿದ್ಯಾಲಯವು ಭೂಮಿಯನ್ನು ಹೇಗೆ ಪಡೆದುಕೊಂಡಿತು ಎಂಬುದರ ಬಗ್ಗೆ ಮಾನ್ಯ ಅಧ್ಯಕ್ಷರು, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗೆ ಸಂಕ್ಷಿಪ್ತವಾಗಿ ತಿಳಿಸಿದರು. ಹಾಗೆಯೇ ಒಮ್ಮೆ ಶಿಕ್ಷಣಕ್ಕಾಗಿ ಮತ್ತು ಸಂಶೋಧನೆಯ ಉದ್ದೇಶಕ್ಕಾಗಿ ಪಡೆದ ಭೂಮಿಯನ್ನು ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣದ ಉದ್ದೇಶಕ್ಕಾಗಿ ನೀಡಲು ಮೊದಲಿನ ಭೂಮಾಲೀಕರು ತಕರಾರು ಮಾಡಬಹುದು ಎಂಬುದನ್ನು ತಿಳಿಸಿದರು. ಇದೇ ರೀತಿಯಲ್ಲಿ ವಿದ್ಯುತ್ ಪ್ರಸರಣಾ ಲೈನ್‌ಗಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಭೂಮಿಯನ್ನು ಕೇಳಿದಾಗ ವಿಶ್ವವಿದ್ಯಾಲಯವು ಭೂಮಿಯನ್ನು ನೀಡುವ ಪ್ರಸ್ತಾಪವನ್ನು ಸಮ್ಮತಿಸಲಿಲ್ಲ. ಇದಾದ ನಂತರ, ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕೆ ಭೂಮಿಯನ್ನು ನೀಡುವುದರ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು. ಶಿಕ್ಷಣಕ್ಕೆ, ಸಂಶೋಧನೆಗೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಈಗಿರುವ ಭೂಮಿಯೇ ಕಡಿಮೆಯಿದ್ದು, ವಿಶ್ವವಿದ್ಯಾಲಯದ 7 ಎಕರೆ ಭೂಮಿಯನ್ನು ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕೆ ನೀಡಲಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ನಿರ್ಧರಿಸಲಾಯಿತು. ಈ ಕುರಿತು ಜಿಲ್ಲಾಧಿಕಾರಿಗಳು, ರಾಯಚೂರು ಇವರಿಗೆ ಬರೆದ ಪತ್ರವನ್ನು ಸಭೆಯಲ್ಲಿ ಓದಲಾಗಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಏಕಮನಸ್ಸಿನಿಂದ ಒಪ್ಪಿಗೆ ನೀಡಿದರು,

ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣದ ಉದ್ದೇಶಕ್ಕೆ ಕೃಷಿ ವಿಶ್ವವಿದ್ಯಾಲಯದ ಭೂಮಿಯನ್ನು ನೀಡುವುದರ ಕುರಿತು ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಗೆ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಕೇಳಲಾದ ವಿವಿಧ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ಸ್ಪಷ್ಟಪಡಿಸಿದರು. 6ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ನಿರ್ಧಾರಿಸಿದಂತೆ ಜಿಲ್ಲಾಡಳಿತದಿಂದ 80–100 ಎಕರೆ ಭೂಮಿಯನ್ನು ಪಡೆದುಕೊಂಡ ನಂತರವಷ್ಟೇ ವಿಶ್ವವಿದ್ಯಾಲಯದ 7 ಎಕರೆ ಭೂಮಿಯನ್ನು ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣದ ಉದ್ದೇಶಕ್ಕೆ ನೀಡಲಾಗುವುದು ಎಂದು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪತ್ರ ಬರೆದಿರುವುದಾಗಿ ಮಾನ್ಯ ಅಧ್ಯಕ್ಷರು ಸ್ಪಷ್ಟಪಡಿಸಿದರು.

ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಯ ವಿವಿಧ ಚಟುವಟಿಕೆಗಳಿಗೆ ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ.) ಗಳ ಅನುದಾನದ ಬಳಕೆಯ ಕುರಿತು ಕೇಳಲಾದ ಪ್ರಶ್ನೆಗೆ ಮಾನ್ಯ ಅಧ್ಯಕ್ಷರು ಈ ಯೋಜನೆಗಳಿಗೆ ಸಂಬಂಧಿಸಿದಂತಾ ಅನುದಾನವನ್ನು ಅದೇ ಯೋಜನೆಯ ಉದ್ದೇಶಗಳಿಗೆ ಮಾತ್ರ ವ್ಯವಸ್ಥಿತವಾಗಿ ಬಳಸಿರುವುದಾಗಿ, ಉಳಿದ ಹಣವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿಶೇಷ ಘಟಕದ ನಿರ್ಮಾಣಕ್ಕಾಗಿ ಖರ್ಚು ಮಾಡುವುದಾಗಿ ತಿಳಿಸಿದರು. ಈ ಕುರಿತು ಡಾ. ಎಸ್.ಕೆ. ಮೇಟಿ, ಡೀನ್ (ಸ್ನಾತಕೋತ್ತರ) ಮತ್ತು ಸಂಯೋಜಕರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಘಟಕ ಇವರು ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ.) ಗಳ ಅನುದಾನವನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿರುವುದನ್ನು ದೃಢಪಡಿಸಿದರು ಮತ್ತು ಈ ಯೋಜನೆಯ ಲೆಕ್ಕ ಖಾತೆಯು ಸರಿಯಾಗಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ವಿಶೇಷ ಘಟಕದ ಭವನವನ್ನು ನಿರ್ಮಿಸಲು ಏನಾದರು ಹಣದ ಕೊರತೆ ಉಂಟಾದಲ್ಲಿ ವಿಶ್ವವಿದ್ಯಾಲಯವು ಅನುದಾನವನ್ನು ನೀಡಲು ಉತ್ಸುಕವಾಗಿದೆ ಎಂದು ತಿಳಿಸಿದರು.

**ಠರಾವು:**

ವಿಶ್ವವಿದ್ಯಾಲಯವು ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಹಾಗೂ ವಿಶ್ವವಿದ್ಯಾಲಯದ ಅವಶ್ಯಕ ಉತ್ಕೃಷ್ಟ ಸಂಸ್ಥೆಗಳನ್ನು (ಸೆಂಟರ್ಸ್ ಆಫ್ ಎಕ್ಸಲೆನ್ಸ್) ನಿರ್ಮಿಸಲು ಸಹ ಭೂಮಿಯ ಕೊರತೆ ಇರುವುದರ ಕುರಿತು ವಿಸ್ತೃತವಾದ ಚರ್ಚೆಯ ನಂತರ, ರಾಯಚೂರು ಜಿಲ್ಲಾ ಆಡಳಿತ ಭವನದ ನಿರ್ಮಾಣಕ್ಕೆ ವಿಶ್ವವಿದ್ಯಾಲಯದ ಭೂಮಿಯನ್ನು ನೀಡಲಾಗುವುದಿಲ್ಲವೆಂದು ನಿರ್ಧಾರಿಸಲಾಯಿತು.

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 1** | **ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |

ಹೊಸ ಸಿವಿಲ್ ಕಾಮಗಾರಿಗಳನ್ನು ಕೃವಿವಿ ರಾಯಚೂರಿನ ಈ ಕೆಳಕಂಡ ವಿವಿಧ ಆವರಣಗಳಲ್ಲಿ ಅಂದರೆ, ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ ಹಾಗೂ ಕೃಷಿ ಮಹಾವಿದ್ಯಾಲಯ, ಗುಲಬರ್ಗಾದಲ್ಲಿ ಅವಶ್ಯಕತೆಗನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕೈಗೊಳ್ಳಲಾಗುವುದು ಎಂದು ಮಾನ್ಯ ಅಧ್ಯಕ್ಷರು ವ್ಯವಸ್ಥಾಪನ ಮಂಡಳಿಯ ಸದಸ್ಯರಿಗೆ ತಿಳಿಸಿದರು. ಇದಾದ ನಚಿತರ ಮೆ. ಮಹಗಾಂವಕರ್, ಅಸೋಶಿಯೆಟ್, ಗುಲ್ಬರ್ಗಾ ಮತ್ತು ಮೇ. ಇಚಿಜನಿಯರಿಂಗ್ ಕನ್ಸಲಟೆಂಟ್ ಸರ್ವೀಸ್,

ರಾಯಚೂರು ಇವರು ಕೃಷಿ ಮಹಾವಿದ್ಯಾಲಯ, ಗುಲ್ಬರ್ಗಾದ ವಿವಿಧ ಕಟ್ಟಡಗಳ ನಿರ್ಮಾಣದ ಕುರಿತು ವಿವಿರಗಳನ್ನು ಮಂಡಿಸಿದರು.

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪ್ರಸ್ತಾಪಿತ ಸಿವಿಲ್ ಕಾಮಗಾರಿಗಳಾದ ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ (ಕ್ರಮ ಸಂಖ್ಯೆ 1– 2,100 ಮಿ. ಚೈನ್–ಲಿಂಕ್ ಫೆನ್ಸ್‌ಅನ್ನು ಒದಗಿಸುವುದು) ಮತ್ತು ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ (ಕ್ರಮ ಸಂಖ್ಯೆ 2– 205 ಚ.ಮೀ. ವಿಸ್ತೀರ್ಣದ ಭತ್ತ ಸ್ಕೀಮಿನ ಪ್ರಯೋಗಾಲಯ ಕಟ್ಟಡ ನಿರ್ಮಾಣ)ಗಳನ್ನು ಕೈಗೊಳ್ಳಲು ಅನುಮೋದಿಸಿತು. ಮುಂದುವರೆದು, ಕೃಷಿ ಮಹಾವಿದ್ಯಾಲಯ, ಗುಲಬರ್ಗಾಕ್ಕೆ ವಿವಿದ ಕಟ್ಟಡಗಳನ್ನು ನಿರ್ಮಿಸಲು ಮೆ. ಮಹಾಗಾವಂಕರ್, ಅಸೋಶಿಯೆಟ್, ಗುಲ್ಬರ್ಗಾ ಇವರು ತಯಾರಿಸಿದ ವಾಸ್ತುಶಿಲ್ಪ ನಕ್ಷೆಯನ್ನು ಒಪ್ಪಲಾಯಿತು. ಸದರಿ ವಾಸ್ತುಶಿಲ್ಪ ನಕ್ಷೆಯ ವಿವರಣಾತ್ಮಕ ಶೃಂಗನಕ್ಷೆಯನ್ನು ತಯಾರಿಸಲು ಸೂಚಿಸಿತು. ಸದರಿ ಶೃಂಗನಕ್ಷೆಯಲ್ಲಿ ಕಟ್ಟಡದ ರಮ್ಯನೋಟ, ಹೂದೋಟಗಳ ನಿರ್ಮಾಣ ಹಾಗೂ ಅವುಗಳ ಹಸಿರು ಪರಿಣಾಮ, ಸೌಂದರ್ಯವರ್ಧಕ ಮೌಲ್ಯ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಪರಿಗಣಿಸಿ ತಯಾರಿಸಲು ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷಕರು ಕೃವಿವಿ., ರಾಯಚೂರಿನಲ್ಲಿ ಅಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡಿದೆ ಮತ್ತು ಇದರ ಜಾಹಿರಾತನ್ನು ಪತ್ರಿಕೆಗಳಲ್ಲಿ ಕೊಡಲಾಗುವುದು ಎಂದು ಮಾನ್ಯ ವ್ಯವಸ್ಥಾಪನಾ ಮಂಡಳಿ ಸದಸ್ಯರ ಗಮನಕ್ಕೆ ಈ ಸಂದರ್ಭದಲ್ಲಿ ತಂದರು. ಹಾಗೆಯೇ ಹಿಂಬಾಕಿ ಮತ್ತು ಭರ್ತಿಯಾಗದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸಹ ಸದರಿ ಜಾಹೀರಾತಿನಲ್ಲಿ ನೀಡುವುದಾಗಿ ತಿಳಿಸಿದರು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 21–11–2011 | ಸಹಿ /– 21–11–2011 |
| **(ಬಿ.ವಿ. ಪಾಟೀಲ)** | **(ಪಿ. ಬಾಲಕೃಷ್ಣನ್)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ.

ಪ್ರತಿಯನ್ನು: ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು ಇವರಿಗೆ ಸಲ್ಲಿಸಲಾಗಿದೆ.